


INSTAKAS

# ಫ್ರಾನ್ಸ್‌ನಲ್ಲಿ 52ನೇ G-7 ಶೃಂಗಸಭೆ

**ಇದೀಗ ಸುದ್ದಿಯಲ್ಲಿ:**

- ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಫ್ರಾನ್ಸ್‌ನ ಎವಿಯನ್-ಲೆಸ್-ಬೈನ್ಸ್‌ನಲ್ಲಿ (Évian-les-Bains) ಜರುಗಿದ 52ನೇ G-7 ಶೃಂಗಸಭೆಯ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದರು. ಪ್ರಧಾನಿಯವರು ಫ್ರೆಂಚ್ ಅಧ್ಯಕ್ಷರೊಂದಿಗೆ ದ್ವಿಪಕ್ಷೀಯ ಮಾತುಕತೆಗಳನ್ನು ಸಹ ನಡೆಸಿದರು.




## 52ನೇ G-7 ಶೃಂಗಸಭೆಯ ಪ್ರಮುಖ ವಿವರಗಳು:

| ವಿಷಯ | ಚರ್ಚೆಯ ಪ್ರಮುಖ ಅಂಶಗಳು |
|---|---|
| ಸ್ಥಳ | ಎವಿಯನ್-ಲೆಸ್-ಬೈನ್ಸ್, ಫ್ರಾನ್ಸ್ (Évian-les-Bains, France) |
| ದಿನಾಂಕ | ಜೂನ್ 15-17, 2026 (ಮುಖ್ಯ ಶೃಂಗಸಭೆ: ಜೂನ್ 17-18) |
| ಭಾರತದ ಭಾಗವಹಿಸುವಿಕೆ | ಔಟ್‌ರೀಚ್ ಅಥವಾ ಪಾಲುದಾರ ದೇಶವಾಗಿ (Outreach/Partner Country) 13ನೇ ಬಾರಿ ಭಾಗಿ |
| ಸತತ 7ನೇ ಬಾರಿ ಪ್ರಧಾನಿ ಮೋದಿಯವರ ಭಾಗವಹಿಸುವಿಕೆ | G-7 ಶೃಂಗಸಭೆಯಲ್ಲಿ ಸತತ 7ನೇ ಬಾರಿಗೆ ಪ್ರಧಾನಿ ಮೋದಿ ಭಾಗವಹಿಸಿದ್ದಾರೆ. |
| ಸತತ 8ನೇ ಆಹ್ವಾನ | G-7 ಶೃಂಗಸಭೆಗೆ ಭಾರತವನ್ನು ಸತತ 8ನೇ ಬಾರಿಗೆ ಆಹ್ವಾನಿಸಲಾಗಿದೆ. |
| ಆಹ್ವಾನ | ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರಿಂದ ಪ್ರಧಾನಿಗೆ ಆಹ್ವಾನ |

## 52ನೇ G-7 ಶೃಂಗಸಭೆ: ಚರ್ಚಿಸಲಾದ ಪ್ರಮುಖ ವಿಷಯಗಳು

| ಘೋಷಣೆ | ಕೈಗೊಂಡ ನಿರ್ಣಯಗಳು |
|---|---|
| ಆರ್ಥಿಕ ಭದ್ರತೆ | ಮಾರುಕಟ್ಟೆಯೇತರ ನೀತಿಗಳು, ಪೂರೈಕೆ ಸರಪಳಿ ಮತ್ತು ನಿರ್ಣಾಯಕ ತಂತ್ರಜ್ಞಾನದ ರಕ್ಷಣೆಯನ್ನು ಬಲಪಡಿಸಲು ನಿರ್ಧರಿಸಲಾಗಿದೆ. |
| ಕೃತಕ ಬುದ್ಧಿಮತ್ತೆ ಆಡಳಿತ (AI Governance) | ಕೃತಕ ಬುದ್ಧಿಮತ್ತೆ ಸುರಕ್ಷತೆ , ಅರೆವಾಹಕಗಳ ಸಂಪರ್ಕ ಗುಂಪು (Semiconductors) ರಚನೆ ಹಾಗೂ ಡಿಜಿಟಲ್ ವಿಭಜನೆಯನ್ನು ನಿವಾರಿಸಲು ಒಪ್ಪಲಾಗಿದೆ. |
| ಉಕ್ರೇನ್ ಬೆಂಬಲ | ಮಿಲಿಟರಿ ಬೆಂಬಲ, ಇಂಧನ ಸ್ಥಿರತೆ ಹಾಗೂ ರಷ್ಯಾದ ತೈಲದ ಮೇಲಿನ ನಿರ್ಬಂಧಗಳನ್ನು ಮುಂದುವರಿಸಲು ನಿರ್ಣಯಿಸಲಾಗಿದೆ. |
| ಮಧ್ಯಪ್ರಾಚ್ಯ (Middle East) | ಇಂಡೋ-ಪೆಸಿಫಿಕ್ ಸ್ಥಿರತೆ, ಗಾಜಾ ಬೆಂಬಲ ಹಾಗೂ ಇರಾನ್ ಪರಮಾಣು ಬೆದರಿಕೆಗಳನ್ನು ನಿರ್ವಹಿಸಲು ಚರ್ಚಿಸಲಾಗಿದೆ. |
| ಜಾಗತಿಕ ಆರೋಗ್ಯ | ಸಾಂಕ್ರಾಮಿಕ ನಿಧಿ (Pandemic Fund), ರೋಗನಿರೋಧಕ ಶಕ್ತಿ ವೃದ್ಧಿ ಹಾಗೂ ಆ್ಯಂಟಿಮೈಕ್ರೋಬಿಯಲ್ ಪ್ರತಿರೋಧ (Antimicrobial Resistance) ತಡೆಯಲು ಒತ್ತು ನೀಡಲಾಗಿದೆ. |
| ಆಹಾರ ಭದ್ರತೆ | ಅಪುಲಿಯಾ ಆಹಾರ ಉಪಕ್ರಮ ಮತ್ತು ಸಾಲ ನಿರ್ವಹಣೆಗೆ ನೈರೋಬಿ-ವಾಷಿಂಗ್ಟನ್ ದೃಷ್ಟಿಕೋನವನ್ನು ಬೆಂಬಲಿಸಲಾಗಿದೆ. |